**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.**
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್ ನಂ: 0821 – 2417106
ಫ್ಯಾಕ್ಸ್ ನಂ: 0821 – 2417105
e-mail:fa@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ 2ನೇ ಹಂತ,
ಹಿನಕಲ್, ಮೈಸೂರು.570017.

ಕ್ರಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)18-19/ Cys-1257 ದಿನಾಂಕ: 14 DEC 2018
ಲಗತ್ತು:

# ಸುತ್ತೋಲೆ

**ವಿಷಯ:**-ಜಿ.ಎಸ್.ಟಿ ಕಾಯ್ದೆಯ 2017ರ ಅಡಯಲ್ಲಿ ಟಿ.ಡಿ.ಎಸ್ (Tax Deduction at Source) ನಿಯಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ:**-1).ಈ ಕಛೇರಿ ಪತ್ರ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ತೆ)/ಸಪ್ರವ್ಯ(ತೆ)/ಹಿಸ(ತೆ)/18-19/ CYS-831 ದಿನಾಂಕ.20.09.2018.

2).ಈ ಕಛೇರಿ ಪತ್ರ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ತೆ)/ಸಪ್ರವ್ಯ(ತೆ)/ಹಿಸ(ತೆ)/18-19/ CYS-938 ದಿನಾಂಕ.15.10.2018.

***********

ದಿನಾಂಕ 01.10.2018ರಿಂದ ಅನ್ವಯವಾಗುವಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಸೆಕ್ಷನ್ (51)ರಡಿಯಲ್ಲಿ, ಅಧೀನ ಕಾರ್ಯದರ್ಶಿ, ಕೇಂದ್ರೀಯ ಪರೋಕ್ಷ ತೆರಿಗೆ ಮಂಡಳಿ, ಭಾರತ ಸರ್ಕಾರ ರವರ ಅಧಿಸೂಚನೆ ಸಂಖ್ಯೆ: 50/2018-Cetral Tax(Rate), ದಿನಾಂಕ 13.09.2018 ರನ್ವಯ ಜಿ.ಎಸ್.ಟಿ ಟಿ.ಡಿ.ಎಸ್ ನಿಯಮಗಳನ್ನು ಸಂಬಂಧಿಸಿದ ಲೆಕ್ಕ ಘಟಕಗಳು/ವಿಭಾಗಗಳು ಆದಾಯ ತೆರಿಗೆಯ TAN ಸಂಖ್ಯೆಯ ಆಧಾರದ ಮೇಲೆ ಪ್ರತ್ಯೇಕವಾದ ಜಿ.ಎಸ್.ಟಿ ಟಿ.ಡಿ.ಎಸ್ ನೋಂದಣಿಯನ್ನು ಪಡೆದು ಈ ಕೆಳಕಂಡಂತೆ ಕಟ್ಟುನಿಟ್ಟಾಗಿ ಎಲ್ಲಾ ವಿಭಾಗಗಳು ಅನುಸರಿಸತಕ್ಕದ್ದು:

1. ಕರ್ನಾಟಕ ರಾಜ್ಯದೊಳಗಿನ ಒಳ ಮುಖ ಪೂರೈಕೆಗಳಾದ ಸರಕು ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಖರೀದಿ/ಗುತ್ತಿಗೆ/ಕಾರ್ಯಾದೇಶದ ಮೌಲ್ಯ 2.50 ಲಕ್ಷಕ್ಕಿಂತ ಹೆಚ್ಚಿರುತ್ತದೆಯೋ ಅಂತಹ ಹುಂಡಿಗಳಿಗೆ ಕಡ್ಡಾಯವಾಗಿ ಈ ಕೆಳಕಂಡಂತೆ ಟಿ.ಡಿ.ಎಸ್‌ನ್ನು ಮಾಡತ್ತಕ್ಕದ್ದು.

   A) ಸಿ.ಜಿ.ಎಸ್.ಟಿ ಟಿ.ಡಿ.ಎಸ್ 1%

   B) ಎಸ್.ಜಿ.ಎಸ್.ಟಿ ಟಿ.ಡಿ.ಎಸ್ 1%

2. ಕರ್ನಾಟಕ ರಾಜ್ಯದೊಂದಿಗೆ ದೇಶದ ಇತರ ರಾಜ್ಯಗಳೊಡನೆ ಒಳ ಮುಖ ಪೂರೈಕೆಗಳಾದ ಸರಕು ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಖರೀದಿ/ಗುತ್ತಿಗೆ/ಕಾರ್ಯಾದೇಶದ ಮೌಲ್ಯ 2.50 ಲಕ್ಷಕ್ಕಿಂತ ಹೆಚ್ಚಿರುತ್ತದೆಯೋ ಅಂತಹ ಹುಂಡಿಗಳಿಗೆ ಕಡ್ಡಾಯವಾಗಿ ಐ.ಜಿ.ಎಸ್.ಟಿ ಟಿ.ಡಿ.ಎಸ್ ಶೇಕಡಾ 2ರಷ್ಟು ಮಾಡತಕ್ಕದ್ದು. ಈ ಕೆಳಕಂಡಂತೆ ಟಿ.ಡಿ.ಎಸ್‌ನ್ನು ಮಾಡತ್ತಕ್ಕದ್ದು.

## Accounting of TDS

| | | Rs. |
|---|---|---|
| ಹುಂಡಿಯ ಮೊತ್ತ | | 10,00,000/- |
| ಸಾರಿಗೆ ಮತ್ತು ನಿರ್ವಹಣೆ ಶುಲ್ಕ | | 50,000/- |
| **ಒಟ್ಟು:-** | | **10,50,000/-** |
| ಸಿ.ಜಿ.ಎಸ್.ಟಿ – 9% | 94,500/- | |
| ಎಸ್.ಜಿ.ಎಸ್.ಟಿ – 9% | 94,500/- | 1,89,000/- |
| **ಹುಂಡಿಯ ಒಟ್ಟು ಮೊತ್ತ :-** | | **12,39,000/-** |
| | | |
| TDS on Rs.10,50,000/- | | |
| ಸಿ.ಜಿ.ಎಸ್.ಟಿ – 1% | 10,500/- | |
| ಎಸ್.ಜಿ.ಎಸ್.ಟಿ – 1% | 10,500/- | 21,000/- |
| | | |
| **ಗುತ್ತಿಗೆದಾರರಿಗೆ ಪಾವತಿಸುವ ಮೊತ್ತ (ರೂಗಳಲ್ಲಿ)** | | **12,18,000/-** |

3. ಯಾವ ಖರೀದಿ/ಗುತ್ತಿಗೆ/ಕಾರ್ಯಾದೇಶದ ಹುಂಡಿಗಳ ಮೌಲ್ಯ ರೂ.2.50 ಲಕ್ಷಕ್ಕಿಂತ ಹೆಚ್ಚಿದ್ದು ಅವು ಒಂದೇ ಹುಂಡಿಯಾಗಿರಬಹುದು ಅಥವಾ ಹಂತ ಹಂತವಾಗಿ ಪಾವತಿಸುವ ವಿವಿಧ ಹುಂಡಿಗಳಾಗಿರಬಹುದು.

4. ಕೇವಲ ನೋಂದಾಯಿತ ಪೂರೈಕೆದಾರರಿಂದ ಮಾತ್ರ ಸೇವೆ ಅಥವಾ ಸರಕುಗಳನ್ನು ಪಡೆದಿದ್ದರೆ ಟಿ.ಡಿ.ಎಸ್‌ನ್ನು ಮಾಡತಕ್ಕದ್ದು. ಹಾಗೂ ನೋಂದಾಯಿತ ಸರಕು ಅಥವಾ ಸೇವೆ ಪೂರೈಕೆದಾರರು ನೀಡುವ ಜಿ.ಎಸ್.ಟಿ ನೋಂದಣಿ ಸಂಖ್ಯೆಯನ್ನು, ಸರಿಯಿರುವ ಬಗ್ಗೆ www.gst.gov.nic.inನಲ್ಲಿ ಪರಿಶೀಲಿಸಿ ಜಿ.ಎಸ್.ಟಿ ಸಂಖ್ಯೆ ಸರಿಯಿರುವ ಬಗ್ಗೆ ಖಾತರಿ ಪಡಿಸಿಕೊಂಡು ಹುಂಡಿಗಳನ್ನು ಪಾಸುಮಾಡತಕ್ಕದ್ದು.

5. ಹುಂಡಿಗಳನ್ನು ಪಾಸುಮಾಡಿದ ನಂತರ ಕಟಾವು ಮಾಡಲಾದ ಜಿ.ಎಸ್,ಟಿ ಟಿ.ಡಿ.ಎಸ್. ಮೊತ್ತವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಗಳಿಗೆ (ನಿಗಮದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: CESC/CFO/A/cs/C/1233/18-19/Cys-1007 Dated 23.10.2018ರನ್ವಯ ಜಮಾ ಮಾಡಿ ಸಂಬಂಧಿಸಿದ ಪ್ರಾಧಿಕಾರಗಳಿಗೆ ಪಾವತಿಸತಕ್ಕದ್ದು.

| ಕ್ರ ಸಂ | ವಿವರ | ಲೆಕ್ಕ ಶೀರ್ಷಿಕೆ | ಜಿ.ಎಸ್.ಟಿ ಟಿ.ಡಿ.ಎಸ್ ದರ |
|---|---|---|---|
| 1 | ಸಿ.ಜಿ.ಎಸ್.ಟಿ | 46.9017 | 1% |
| 2 | ಎಸ್.ಜಿ.ಎಸ್.ಟಿ | 46.9027 | 1% |
| 3 | ಐ.ಜಿ.ಎಸ್.ಟಿ | 46.9047 | 2% |

6. ಯಾವ ಮಾಹೆಯಲ್ಲಿ ಜಿ.ಎಸ್.ಟಿ ಟಿ.ಡಿ.ಎಸ್‌ನ್ನು ಕಟಾವು ಮಾಡಲಾಗಿರುತ್ತದೋ. ಆ ನಂತರದ/ಮುಂದಿನ ಮಾಹೆಯ 10ನೇ ತಾರೀಖಿನೊಳಗೆ ಸಂಬಂಧಿಸಿದ ಜಿ.ಎಸ್.ಟಿ ಪ್ರಾಧಿಕಾರಕ್ಕೆ ತೆರಿಗೆಯನ್ನು ಪಾವತಿಸಿ ಜಿ.ಎಸ್.ಟಿ.ಆರ್–7ನ್ನು ಇ–ಫೈಲಿಂಗ್ ಮಾಡಿತಕ್ಕದ್ದು ಹಾಗೂ 15ನೇ ತಾರೀಖಿನೊಳಗೆ ನಮೂನೆ ಜಿ.ಎಸ್.ಟಿ.ಆರ್–7Aನ್ನು ಸಂಬಂಧಿಸಿದ ಸರಕು ಮತ್ತು ಸೇವಾ ಪೂರೈಕೆದಾರರಿಗೆ ನೀಡುವುದು. ತಪ್ಪಿದಲ್ಲಿ ಪಾವತಿಸಬೇಕಾದ ತೆರಿಗೆ ಮೊತ್ತದ ಮೇಲೆ ಶೇಕಡಾ 18ರಷ್ಟು ದಂಡವನ್ನು ಪಾವತಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದ ಬಟಾವಡೆ ಅಧಿಕಾರಿಗಳೇ ಹೊಣೆಗಾರರಾಗಿರುತ್ತಾರೆ.

7. ಯಾವ ಹುಂಡಿಗಳಲ್ಲಿ ನಮೂದಿಸಿರುವ ಮೌಲ್ಯದ ಮೊತ್ತದಲ್ಲಿ, ಸಿ.ಜಿ.ಎಸ್.ಟಿ ಎಸ್.ಜಿ.ಎಸ್.ಟಿ ಹಾಗೂ ಐ.ಜಿ.ಎಸ್.ಟಿ ಮತ್ತು ಸೆಸ್ ಮೊತ್ತವೇನಾದರೂ ಇದ್ದಲ್ಲಿ ಅವುಗಳನ್ನು ಹೊರತುಪಡಿಸಿ ಟಿ.ಡಿ.ಎಸ್‌ನ್ನು ಮಾಡತಕ್ಕದ್ದು.

8. ಅನ್ವಯಿಸುವ ದರಗಳಿಗಿಂತ ಕಡಿಮೆ ಟಿ.ಡಿ.ಎಸ್ ಮಾಡಿದಲ್ಲಿ/ಟಿ.ಡಿ.ಎಸ್ ಮಾಡದಿದ್ದಲ್ಲಿ ಜಿ.ಎಸ್.ಟಿ ಕಾಯ್ದೆ ಸೆಕ್ಷನ್ (51), (73) ಹಾಗೂ (74)ರಲ್ಲಿ ಉದ್ಭವಿಸಬಹುದಾದ ದಂಡ ಇತ್ಯಾದಿಗಳಿಗೆ ಸಂಬಂಧಿಸಿದವರೆ ಹೊಣೆಗಾರರಾಗಿರುತ್ತಾರೆ.

9. ಈ ಜಿ.ಎಸ್.ಟಿ ಟಿ.ಡಿ.ಎಸ್ ನಿಯಮಗಳು ಈ ಕೆಳಕಂಡ ವ್ಯವಹಾರಗಳಿಗೆ ಅನ್ವಯಿಸುವುದಿಲ್ಲ.

A) ನೋಂದಾಯಿವಲ್ಲದ ಪೂರೈಕೆದಾರರಿಂದ ಸೇವೆಯನ್ನು ಅಥವಾ ಸರಕನ್ನು ಪಡೆದಿದ್ದರೆ ಅಂತವರ ಹುಂಡಿಗಳ ಮೇಲೆ.

B) ಯಾವ ಪೂರೈಕೆಯು ಹಿಮ್ಮುಖ ತೆರಿಗೆ ವಿಧಿಸುವಿಕೆ ಒಳಪಡುತ್ತದೋ ಅಂತವುಗಳ ಹುಂಡಿಗಳಿಗೆ (Reverse Charge Machanism)

C) ಒಂದು ಸಾರ್ವಜನಿಕ ವಲಯದ ಉದ್ದಿಮೆಯಿಂದ ಮತ್ತೊಂದು ಸಾರ್ವಜನಿಕ ವಲಯದ ಉದ್ದಿಮೆಯು ಸರಕು ಅಥವಾ ಸೇವೆಯನ್ನು ಪಡೆದಿದ್ದರೇ ಅವುಗಳ ಹುಂಡಿಗಳನ್ನು ಪಾಸುಮಾಡುವಾಗ ಈ ನಿಯಮಗಳು ಅನ್ವಯಿಸುವುದಿಲ್ಲ.

D) ಹಾಗೂ ಒಬ್ಬರೇ ಪೂರೈಕೆದಾರರಿಗೆ ರೂ.2.50 ಲಕ್ಷಕ್ಕಿಂತ ಕಡಿಮೆ ಮೌಲ್ಯದ ಒಂದಕ್ಕಿಂತ ಹೆಚ್ಚು ಬೇರೆ ಬೇರೆ ಖರೀದಿ ಆದೇಶ ನೀಡಿದರೆ ಅಂತವುಗಳಿಗೆ ಜಿ.ಎಸ್.ಟಿ ಟಿ.ಡಿ.ಎಸ್ ಮಾಡುವ ಅವಶ್ಯಕತೆ ಇರುವುದಿಲ್ಲ. (ಅಧಿಸೂಚನೆ ಸಂಖ್ಯೆ: 61/2018– Cetral Tax ದಿನಾಂಕ 05.11.2018)

E) ಯಾವ ಸೇವೆ ಮತ್ತು ಸರಕುಗಳು ಜಿ.ಎಸ್.ಟಿ ತೆರಿಗೆಯಿಂದ ವಿನಾಯಿತಿ ಪಡೆದಿರುತ್ತವೆಯೋ/ಅನ್ವಯಿಸುವುದಿಲ್ಲವೋ ಅಂತವುಗಳಿಗೆ ಜಿ.ಎಸ್.ಟಿ ಟಿ.ಡಿ.ಎಸ್ ಮಾಡುವ ಅವಶ್ಯಕತೆ ಇರುವುದಿಲ್ಲ. **ಉದಾ:–** ಪೆಟ್ರೋಲ್, ಡೀಸೆಲ್, ಇತ್ಯಾದಿಗಳು.

10. ಸಂಬಂಧಿಸಿ ವಿಭಾಗಗಳು ಟಿ.ಡಿ.ಎಸ್‌ಗೆ ಸಂಬಂಧಿಸಿದಂತೆ ಈ ಕೆಳಕಂಡ ನಮೂನೆಯಲ್ಲಿ, ಸೂಕ್ತ ದಾಖಲಾತಿಗಳೊಂದಿಗೆ ವಿವರಗಳನ್ನು ಆಂತರಿಕ ತಪಾಸಣೆಗೆ ಒಳಪಡಿಸಿ ನಿರ್ವಹಿಸತಕ್ಕದ್ದು.

ತಪ್ಪಿದಲ್ಲಿ ಸಂಬಂಧಿಸಿದ ಅಧಿಕಾರಿ/ಸಿಬ್ಬಂಧಿಗಳೇ ನೇರ ಹೊಣೆಗಾರರಾಗಿರುತ್ತಾರೆ.

## Record to be maintained by the TDS Authorities for filing of GSTR-7

| Sl No | Tax Inoice No | Date of Tax Invoice | GSTIN of the Firm/ Contractor (Deductee) | Trader Name | Taxable Amount on which Tax is Deducted | Integrated Tax (IGST) | Central Tax (CGST) | State Tax (SGST) | Total |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |

ಮುಖ್ಯ ಆರ್ಥಿಕ ಅಧಿಕಾರಿ.

ಪ್ರತಿಗಳು:-

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ,ನಿಗಮ ಕಛೇರಿ ಮೈಸೂರು,ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್ (ವಿ) ಕಾ ಮತ್ತು ಪಾ, ವಲಯ ಕಛೇರಿ, ಚಾವಿಸನಿನಿ, ಮೈಸೂರು,.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ),ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು(ಲೆಕ್ಕ ಮತ್ತು ಕಂ), ಚಾವಿಸನಿನಿ, ನಿಗಮ ಕಛೇರಿ, ಮೈಸೂರು.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್) ನಿಗಮದ ಅಧಿಕೃತ ಅಂತರ್‌ಜಾಲ ತಾಣದಲ್ಲಿ ಪ್ರಕಟಿಸಲು.
- ಆಪ್ತ ಕಾರ್ಯದರ್ಶಿ, ವ್ಯನಿ/ನಿ(ತಾಂ)/ಮುಲೆಅ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಚಾವಿಸನಿನಿ- ತಮ್ಮ ಅಧೀನ ಕಛೇರಿಗಳಿಗೆ ಸದರಿ ಸುತ್ತೋಲೆಯನ್ನು ರವಾನಿಸತಕ್ಕದ್ದು.
- ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ವಿಭಾಗಗಳು, ಚಾವಿಸನಿನಿ.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ) ಕಾ ಮತ್ತು ಪಾ, ವಿಭಾಗಗಳು/ವೃತ್ತಗಳು/ಚಾವಿಸನಿನಿ.
- ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂ ನಿ) ನಿಗಮ ಕಛೇರಿ, ಚಾವಿಸನಿನಿ. ಮೈಸೂರು.
- ಮು.ಕ.